ಸಿಸಿ ನಂ.*369/2018*

ಪಿ .ಡಬ್ಲ್ಯೂ-*1*

**ದಿಃ *23-08-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ.**

ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಪಿರ್ಯಾದಿನಲ್ಲಿ ನಮೂದು ಮಾಡಿರುವ ಹಣದ ಮೊತ್ತ ಮತ್ತು ದಿನಾಂಕ ನನಗೆ ಗೊತ್ತು. ತಾವು ತಮ್ಮ ಪಿರ್ಯಾದಿನಲ್ಲಿ ಹೇಳಿದ್ದೀರಿ ಆಗಾಗ ತಾವು ಆರೋಪಿಯ ಅಕೌಂಟಿಗೆ ಹಣವನ್ನು ಹಾಕುತ್ತಿದ್ದೀರಿ ಅಂತ, ತಮಗೇನಾದರೂ ಆರೋಪಿಯ ಬ್ಯಾಂಕ್ ಅಕೌಂಟ್ ಖಾತೆ ನಂಬರ್ ಗೊತ್ತಾ ಎಂದರೆ ಸಾಕ್ಷಿಯು ನನಗೆ ಗೊತ್ತಿತ್ತು, ಆದರೆ ಈಗ ನೆನಪಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ತಾವು ಆರೋಪಿಯ ಯಾವ ಅಕೌಂಟಿಗೆ ಹಣ ಜಮಾ ಮಾಡುತ್ತಿದ್ದೀರಿ ಎಂಬ ಬಗ್ಗೆ ತಾವೇನಾದರೂ ದಾಖಲೆ ಇಟ್ಟಿದ್ದೀರಾ ಎಂದರೆ ಸಾಕ್ಷಿ ದಾಖಲೆ ಇದೆ, ನ್ಯಾಯಾಲಯಕ್ಕೆ ಹಾಜರುಪಡಿಬಲ್ಲೆ ಎಂದು ಸಾಕ್ಷ್ಯ ನುಡಿಯುತ್ತಾರೆ. ತಮ್ಮ ಪಿರ್ಯಾದಿನಲ್ಲಿ ದಿಃ *16-03-2016* ಮತ್ತು *16-09-2016* ರಂದು ತಾವು ಆರೋಪಿಗೆ ರೂ. *2,19,000/-* ರೂಪಾಯಿ ಹಣವನ್ನು ಕೊಟ್ಟಿದ್ದೀರಿ ಎಂದು ತಾವು ಹೇಳಿದ್ದೀರಿ ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯಕ್ಕೆ ತಾವೇನಾದರೂ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಾನು ದಾಖಲಾತಿಯನ್ನು ಹಾಜರುಪಡಿಬಲ್ಲೆ ಎಂದು ನುಡಿಯುತ್ತಾರೆ. ಸದರಿ ದಿನಾಂಕಗಳಂದು ತಾವು ತಮ್ಮ ಬ್ಯಾಂಕಿನಿಂದ ಹಣವನ್ನು ಡ್ರಾ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನ್ಯಾಯಾಲಯಕ್ಕೆ ನಾನು ಹಾಜರುಪಡಿಸಬಲ್ಲೆ ಎಂದು ಸಾಕ್ಷ್ಯ ನುಡಿಯುತ್ತಾರೆ. ದಿಃ*29-06-2016* ಕ್ಕಿಂತ ಹಿಂದಿನ ನನ್ನ ಬ್ಯಾಂಕ್ ಖಾತೆಯ ಸ್ಟೇಟ್ ಮೆಂಟ್ ಎಕ್ಸಟ್ರಾಕ್ಟನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ದಿನಾಂಕಃ *15-03-2016* ರಂದು ತಮ್ಮ ಬಳಿ *10* ಲಕ್ಷ ರೂಪಾಯಿ ನಗದು ಹಣ ಇತ್ತು ಎಂದು ತೋರಿಸಲು ತಾವೇನಾದರೂ ನ್ಯಾಯಾಲಯಕ್ಕೆ ದಾಖಲಾತಿಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ದಿನಾಂಕಃ *15-03-2016* ರಂದು ಅಥವಾ ಅದಕ್ಕಿಂತ ಹಿಂದೆ ತಾವು ಬ್ಯಾಂಕಿನಿಂದ *10* ಲಕ್ಷ ರೂಪಾಯಿ ಹಣವನ್ನು ಡ್ರಾ ಮಾಡಿದ ಬಗ್ಗೆ ತಾವೇನಾದರೂ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಾನು ಹಾಜರುಪಡಿಸಬಲ್ಲೆ ಎಂದು ಸಾಕ್ಷ್ಯ ನುಡಿಯುತ್ತಾರೆ. ದಿಃ *23-12-2020* ರಂದು ನಾನು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುವ ಸಂದರ್ಭದಲ್ಲಿ ನನ್ನ ಎಲ್ಲಾ ಬ್ಯಾಂಕ್ ಖಾತೆ

ವ್ಯವಹಾರಗಳನ್ನು ನ್ಯಾಯಾಲಯಕ್ಕೆ ತಂದು ಹಾಜರುಪಡಿಸಬಲ್ಲೆ ಎಂದು ಹೇಳಿದ್ದೀರಿ, ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ತಂದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ನನ್ನ ಪಿರ್ಯಾದಿನಲ್ಲಿ ಹೇಳಿರುವ ಹಣವನ್ನು ಒಟ್ಟುಗೂಡಿಸಿದರೆ *17* ಲಕ್ಷದ *14* ಸಾವಿರ ರೂಪಾಯಿ ಆಗುತ್ತದೆ ಎಂದರೆ ಸರಿ.

ನಿಪಿ-*6*ರ ನೋಟೀಸಿನಲ್ಲಿ ಆರೋಪಿಯ ವಾಸವಿರುವ ಮನೆಯ ಡೋರ್ ನಂಬರ್ ಮತ್ತು ಅಡ್ಡ ರಸ್ತೆ ನಂಬರ್ ನಮೂದಾಗಿಲ್ಲ ಎಂದರೆ ಸಾಕ್ಷಿಯು ಆರೋಪಿಯು ಹಳ್ಳಿಯಲ್ಲಿರುವ ಕಾರಣ ನಾನು ನಮೂದು ಮಾಡಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ದಿನಾಂಕಃ ***15-03-2016*** ರಿಂದ ***16-09-2016*** ರವರೆಗೆ ಅಥವಾ ಅದಕ್ಕಿಂತ ಹಿಂದೆ ತಾವು ಅಡಿಕೆ ಬೆಳೆದ ಬಗ್ಗೆ ತಮ್ಮ ಹೆಸರಿನಲ್ಲಿ ಇರತಕ್ಕಂತಹ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆಂದು ನುಡಿಯುತ್ತಾರೆ. ದಿನಾಂಕಃ ***15-03-2016*** ರಿಂದ ***16-09-2016*** ರವರೆಗೆ ತಮ್ಮ ಮತ್ತು ಆರೋಪಿಯ ನಡುವೆ ಹಣದ ವ್ಯವಹಾರ ನಡೆದಿದೆ ಎಂದು ಹೇಳಿದ್ದೀರಿ, ಸದರಿ ವಿಚಾರವನ್ನು ತಾವು ತಮ್ಮ ಇನ್ ಕಂ ಟ್ಯಾಕ್ಸ್ ರಿಟರ್ನ್ಸ್ ನಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಸ್ವತಃ ಮುಂದುವರಿದು ಸಾಲದ ಬಗ್ಗೆ ನಮೂದು ಮಾಡಿದ್ದೇನೆಂದು ನುಡಿಯುತ್ತಾರೆ. ನನಗೆ ಸತ್ಯ ಗೊತ್ತಿದ್ದರೂ ಸಹ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ತಾವು ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಈ ಸುಳ್ಳು ಪಿರ್ಯಾದನ್ನು ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u> ಃ ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***